ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 48 ]
Total No. of Questions : 48 ]

**ಸಂಕೇತ ಸಂಖ್ಯೆ : 33-K**
**Code No. : 33-K**

**C**

**CCE PR**
**NSR & NSPR**

Question Paper Serial No. **100**

ಇಲ್ಲಿಂದ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

# ವಿಷಯ : ದ್ವಿತೀಯ ಭಾಷೆ — ಕನ್ನಡ
# Subject : Second Language — KANNADA

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Repeater / NSR & NSPR)**

ದಿನಾಂಕ : 29. 06. 2022 ] [ Date : 29. 06. 2022
ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-30 A.M. to 1-30 P.M.
ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 48 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 5 × 1 = 5**

1. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಗಳ ಸಂಖ್ಯೆ

   (ಎ) ಆರು

   (ಬಿ) ಏಳು

   (ಸಿ) ಐದು

   (ಡಿ) ಒಂಬತ್ತು

2. ವರ್ತಮಾನಕಾಲ ಸೂಚಕ ಪ್ರತ್ಯಯವಿದು

   (ಎ) ದ

   (ಬಿ) ಉತ್ತ

   (ಸಿ) ವ

   (ಡಿ) ಅನ್ನು

3. ‘ಗುರುಗಳಿಂದ’ ಪದದಲ್ಲಿರುವ ವಿಭಕ್ತಿಯ ಹೆಸರು

(ಎ) ಪ್ರಥಮ

(ಬಿ) ದ್ವಿತೀಯ

(ಸಿ) ತೃತೀಯ

(ಡಿ) ಚತುರ್ಥಿ

4. ‘ಪಂಚಾಕ್ಷರಿ’ ಪದದಲ್ಲಿರುವ ಸಂಧಿ

(ಎ) ಸವರ್ಣದೀರ್ಘ ಸಂಧಿ

(ಬಿ) ಗುಣ ಸಂಧಿ

(ಸಿ) ಲೋಪ ಸಂಧಿ

(ಡಿ) ಆಗಮ ಸಂಧಿ

5. ‘ಅಂಕಿತನಾಮ’ಕ್ಕೆ ಉದಾಹರಣೆಯಾಗಿರುವ ಪದ

(ಎ) ನದಿ

(ಬಿ) ಕಾವೇರಿ

(ಸಿ) ಶಿಕ್ಷಕ

(ಡಿ) ಪರ್ವತ

II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : **14 × 1 = 14**

6. ವಿಷದ ಬಾಣವು ಮರಕ್ಕೆ ಏಕೆ ತಗುಲಿತು ?

7. ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ ?

8. ಪುಟ್ಟರಾಜರ ತಂದೆ ತಾಯಿಯರ ಹೆಸರೇನು ?

9. ಪುಟ್ಟರಾಜರ ತಾಯಿ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು ?

10. ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ ?

11. ವಿದ್ಯಾರ್ಥಿಗಳು ಕಾಫಿ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು ?

12. ಗೋಪಾಲನು ಹೊಸ ಪಂಚೆಯನ್ನು ಬಯಸಿದುದೇಕೆ ?

13. ಏಣಿಗೆ ಏಕೆ ಬೀಳುವ ಭಯವಿಲ್ಲ ?

14. ಕವಿ ಮಾನವನ ಬದುಕನ್ನು ಇಬ್ಬನಿಗೆ ಏಕೆ ಹೋಲಿಸಿದ್ದಾರೆ ?

15. ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು ಏಕೆ ?

16. ಕುಣಿಗಲ್ ಕೆರೆಯ ವೈಭವವನ್ನು ಹೆಚ್ಚಿಸಿದ ಅಂಶಗಳು ಯಾವುವು ?

17. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?

18. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು ?

19. ಯುದ್ಧಕ್ಕೆ ಬೆನ್ನು ಹಾಕಿದರೆ ಏನು ಪ್ರಾಪ್ತಿಯಾಗುತ್ತದೆ ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 12 × 2 = 24**

20. ರೈತರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು ?

21. ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯನಾದುದು ಹೇಗೆ ?

22. ವಿಶೇಷ ಚೇತನರಿಗೆ ನೀವು ಯಾವ ಮಾತುಗಳಿಂದ ಧೈರ್ಯ ತುಂಬುವಿರಿ ?

23. ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ ?

24. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು ?

25. ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ ಯಾವ ತರಹದ ಕಪ್ಪುಗಳಿದ್ದವು ?

26. ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಬಸವರಾಜ ಸಬರದ ಏನೆಂದು ಬಣ್ಣಿಸಿದ್ದಾರೆ ?

27. ಮಾನವನ ಬದುಕು ಕರ್ಪೂರದಂತೆ ಇರಬೇಕು ಎಂದು ಕವಿ ಸಿ.ಪಿ.ಕೆ. ಏಕೆ ಹೇಳಿದ್ದಾರೆ ?

28. ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ ?

29. 'ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ' ಈ ಮಾತಿನ ವೈಶಿಷ್ಟ್ಯವೇನು ?

30. ವೈದ್ಯರು ತಮ್ಮ ವೃತ್ತಿಯ ಬಗ್ಗೆ ಹೆಂಡತಿ ರತ್ನಳಿಗೆ ಹೇಳಿದ ಮಾತುಗಳು ಯಾವುವು ?

31. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಿದ ಬಗೆಯನ್ನು ತಿಳಿಸಿ.

**IV. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : $2 \times 3 = 6$**

32. ಅ.ರಾ. ಮಿತ್ರ

33. ಎಂ. ಗೋಪಾಲಕೃಷ್ಣ ಅಡಿಗ

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ : 1 × 3 = 3**

34. ಒಂದೊಂದು ಹೆಜ್ಜೆಯ ಭಾರ
ಹೊರುವಾಗ ನಾ
ಪಟ್ಟಪಾಡು ನನಗೇ ಗೊತು
ಲೀಲಾಜಾಲವಾಗಿ ಮೇಲೇರಿದ
ಇವರಿಗೆ ಭಾರಹೊತ್ತವರ
ಕಾಳಜಿಯೇ ಇಲ್ಲ
ಆನೆ ಭಾರ ಹೊತ್ತು ಗಟ್ಟಿನೆಲದಲ್ಲಿ ಕಾಲೂರಿನಿಂತ
ನನಗೆ ಬೀಳುವ ಭಯವಿಲ್ಲ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3**

35. "ಪುಟ್ಟರಾಜರು ಕೋಗಿಲೆಯಂತೆ ಸುಮಧುರವಾಗಿ ಹಾಡುತ್ತಿದ್ದರು."

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 2 × 3 = 6**

36. "ಒಗ್ಗಟ್ಟಿನಲ್ಲಿ ಬಲವಿದೆ."

**ಅಥವಾ**

"ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ."

37. "ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು."

**ಅಥವಾ**

"ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ."

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 × 3 = 18**

38. "ಏನಾದರೂ ವರವನ್ನು ಕೇಳು ಕೊಡುತ್ತೇನೆ."

39. "ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು."

40. "ನೀವೇ ಕಾಫಿ ಹಾಕಿಕೊಳ್ಳಿ, ಆಮೇಲೆ ಕುಳಿತು ಮಾತನಾಡೋಣ."

41. "ಅಮ್ಮನ ಮಾತು ಸುಳ್ಳಾಗಲಾರದು"

42. "ಪರಹಿತಕೆ ಬಳಲುತಿರಲದುವೆ ಜೀವನವು"

43. "ಶಿವಶಿವ ಕಾದಿಗೆಲಿದೆವು"

**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

44. ಏಕಾಂಗಿ ವೀರನಂತೆ ..........................................

.................................................................

.................................................................

.......................................... ಕತ್ತಲಲ್ಲಿ ನಡೆದನು.

**ಅಥವಾ**

ಕಾಡು ಕಾಡು ಅಲೆದ ........................................

.................................................................

.................................................................

................................ ಮಹಾಬೆಳಕೊಂದು ಕಂಡಿತು.

**X. ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4**

45. ಮೂಡಲ್ ಕುಣಿಗಲ್ ಕೆರೆಯ ಭಾವಾರ್ಥವನ್ನು ನೀವು ಮೆಚ್ಚುವ ರೀತಿಯಲ್ಲಿ ಬಣ್ಣಿಸಿ.

**ಅಥವಾ**

ಮೂಡಲ್ ಕುಣಿಗಲ್ ಕೆರೆ ಜೀವಸಂಕುಲಕ್ಕೆ ಹೇಗೆ ಆಶ್ರಯವಾಗಿದೆ ಎಂದು ವರ್ಣಿಸಿ.

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 × 4 = 4 ( 2 + 2 )**

ನಾಡಿನ ಜಲಸಂಪನ್ಮೂಲಗಳಲ್ಲಿ ನದಿಗಳ ಪಾತ್ರ ಮಹತ್ವದ್ದಾಗಿದೆ. ಇವು ನೀಡುವ ಪ್ರಯೋಜನ ಅಧಿಕ. ನದಿ ಕೇವಲ ಹರಿಯುವ ನೀರಲ್ಲ. ಅದೊಂದು ಪ್ರವಾಹ ಶಕ್ತಿ. ಪ್ರಕೃತಿಯ ವರಪ್ರಸಾದ. ಸಸ್ಯ, ಪ್ರಾಣಿ ಮತ್ತು ಮಾನವ ಜಗತ್ತಿನ ಜೀವನಕ್ಕೆ ಆಧಾರ. ಕರ್ನಾಟಕ ಸುಂದರ ನದಿಗಳ ನಾಡು. ಕಾವೇರಿ, ಕೃಷ್ಣಾ, ತುಂಗಭದ್ರೆ, ಶರಾವತಿ ಮೊದಲಾದ ನದಿಗಳು ನಾಡಿನ ಭಾಗ್ಯಕ್ಕೆ ಕಾರಣವಾಗಿವೆ. ಸಮೃದ್ಧವಾದ ಬೆಳೆಗೆ, ಜಲವಿದ್ಯುತ್ ಯೋಜನೆಗಳಿಗೆ, ಆರ್ಥಿಕ ವಿಕಾಸಕ್ಕೆ, ಜನತೆಯ ನೆಮ್ಮದಿಯ ಜೀವನಕ್ಕೆ ಪ್ರಯೋಜನಕಾರಿಯಾಗಿವೆ.

ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿ ಹರಿಯುವ ನದಿಗಳಲ್ಲಿ ಶರಾವತಿಯೂ ಒಂದು. ಇದು ಕೇವಲ 132 ಕಿ.ಮೀ. ಉದ್ದವಿರುವ ನದಿ. ಆದರೆ ತನ್ನ ಅಪಾರ ಜಲನಿಧಿಯಿಂದ ನಾಡಿನ ಅಕ್ಷಯ ನಿಧಿಯೆನಿಸಿದೆ. ಅಂಬುತೀರ್ಥದಲ್ಲಿ ಹುಟ್ಟಿದ ಶರಾವತಿ ನದಿ ಉಪನದಿಗಳೊಂದಿಗೆ ಬೆಟ್ಟ ಕಣಿವೆಗಳಲ್ಲಿ ಹರಿಯುತ್ತ ಶಿವಮೊಗ್ಗ ಜಿಲ್ಲೆಯ ಜೋಗ ಎಂಬಲ್ಲಿ 253 ಮೀ. ಆಳದ ಕಮರಿಗೆ ಧುಮುಕುತ್ತದೆ. ಅದೇ

ಲೋಕವಿಖ್ಯಾತ ಜೋಗ ಜಲಪಾತ. ನೋಡಲು ಬಲುಸುಂದರ. ಇಲ್ಲಿ ನಾಲ್ಕು ಕವಲಾಗಿ ಧುಮುಕುತ್ತದೆ. ಇದು ಧುಮುಕುವ ವೈಖರಿಯನ್ನು ಕಂಡು ಬ್ರಿಟಿಷರು ರಾಜಾ, ರೋರರ್, ರಾಕೆಟ್, ಲೇಡಿ ಎಂದು ಕರೆದರು. ರಾಜಾ ಒಂದು ಅಖಂಡ ಜಲಧಾರೆ. ಮೇಲಿನಿಂದ ಕೆಳಕ್ಕೆ ಒಂದೇ ಸಮನೆ ಧುಮುಕುತ್ತದೆ. ಎರಡನೆಯ ಕವಲು ಬಂಡೆಯನ್ನು ಕೊರೆದು ಘರ್ಜನೆ ಮಾಡುವುದರಿಂದ ರೋರರ್, ಮೂರನೆಯದು ಬಾಣದಂತೆ ಚಿಮ್ಮಿ ನೀರ, ನೊರೆಗಳ ಮೊತ್ತವುಂಟುಮಾಡುವುದರಿಂದ ರಾಕೆಟ್, ನಾಲ್ಕನೆಯದು ಶ್ವೇತವಸ್ತ್ರಧಾರಿಯಾದ ರಮಣಿ ಬಳ್ಳಿಯಂತೆ ಬಳುಕುತ್ತ ಇಳಿದು ಬರುವುದರಿಂದ ಲೇಡಿ.

ಕವಿಗಳೂ, ಲಾವಣಿಕಾರರೂ ಈ ಸೌಂದರ್ಯವನ್ನು ಮನದಣಿಯೆ ಹಾಡಿ ಹೊಗಳಿದ್ದಾರೆ.

46. ಪ್ರಶ್ನೆಗಳು :

ಅ) ಜೋಗ್‌ನಲ್ಲಿ ಕವಲುಗಳಾಗಿ ಧುಮುಕುವ ಜಲಸಿರಿಯ ವೈಖರಿಯನ್ನು ಬ್ರಿಟಿಷರು ಹೇಗೆ ವರ್ಣಿಸಿದ್ದಾರೆ ?

ಆ) ನಮ್ಮ ನಾಡಿನ ಜಲಸಂಪನ್ಮೂಲಗಳು ಹೇಗೆ ಪ್ರಯೋಜನಕಾರಿಯಾಗಿವೆ ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ : 1 × 4 = 4**

47. ವಾಯುಮಾಲಿನ್ಯದಿಂದಾಗುವ ಪರಿಣಾಮಗಳು.

**ಅಥವಾ**

ದೂರದರ್ಶನದಿಂದಾಗುವ ಪ್ರಯೋಜನಗಳು.

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :**

**1 × 5 = 5**

48. ನಿಮ್ಮನ್ನು ಹಾವೇರಿಯ ಸರ್ಕಾರಿ ಪ್ರೌಢಶಾಲೆಯ 'ತೇಜಸ್' ಎಂದು ಭಾವಿಸಿಕೊಂಡು, ಶಾಲೆಯ ಕೈತೋಟಕ್ಕೆ ಗಿಡಗಳನ್ನು ನೀಡುವಂತೆ ಕೋರಿ ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಬಾಗೇಪಲ್ಲಿ ಸರ್ಕಾರಿ ಪ್ರೌಢಶಾಲೆಯ 'ಸೀಮಾ' ಎಂದು ಭಾವಿಸಿಕೊಂಡು, ಮಾಸ್ಕ್ ಧರಿಸುವ ಅಗತ್ಯತೆಯನ್ನು ತಿಳಿಸಿ, ಸರ್ಕಾರಿ ಪ್ರೌಢಶಾಲೆ, ಚಿಂತಾಮಣಿಯಲ್ಲಿರುವ 'ಪ್ರತಿಮಾ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ.